<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀಮತಿ ಬಿ ಎಂ ಬಿ ವಕೀಲರಿಂದಃ</u>

ನನಗಾದ ಅಪಘಾತ ಕೇಸಿನಲ್ಲಿ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದು ನಿಪಿ-**11** ಆಗಿದೆ, ಆದ್ದರಿಂದ ಅರ್ಜಿಯಲ್ಲಿ ಕಾಣಿಸಿರುವಂತೆ ಆದೇಶವಾಗಲು ಪ್ರಾರ್ಥನೆ.

<u>ಪಾಟೀ ಸವಾಲು **1** ನೇ ಎದುರುದಾರರ ಪರವಾಗಿಃ</u>

ಗೈರು ಹಾಜರು ಏಕಪಕ್ಷೀಯವಾಗಿರುವುದರಿಂದ ಇಲ್ಲ ಎಂದು ಪರಿಗಣಿಸಿದೆ.

<u>ಪಾಟೀ ಸವಾಲು ಶ್ರೀ ಬಿ ಎಂ ಎ ವಕೀಲರಿಂದಃ **2** ನೇ ಎದುರುದಾರರ ಪರವಾಗಿಃ</u>

1. ಈ ಅರ್ಜಿ ಸಲ್ಲಿಸಲು ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು ಈಗ ಸಲ್ಲಿಸಿರುವ ನಿಪಿ-1 ರಿಂದ 11 ದಾಖಲೆಗಳನ್ನು ಬಿಟ್ಟು ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಬೇರೆ ಯಾವುದೇ ದಾಖಲಾತಿಗಳು ಇಲ್ಲ. ನಾನು ಪಿ ಯು ಸಿ ವರೆಗೆ ಓದಿದ್ದೇನೆ.

2. 1 ನೇ ಎದುರುದಾರ ನನ್ನ ತಂದೆ ಎಂದರೆ ಸರಿ. ನಾನು ನನ್ನ ತಂದೆ ಒಂದೇ ಕುಟುಂಬದಲ್ಲಿ ವಾಸವಾಗಿಲ್ಲ ಬೇರೆ ಬೇರೆ ಇದ್ದೇವೆ. ನಾವು ಪ್ರತ್ಯೇಕವಾಗಿ ವಾಸವಾಗಿರುವುದರ ಬಗ್ಗೆ ರೇಷನ್ ಕಾರ್ಡ್ ವಗೈರೆ ಹಾಜರುಪಡಿಸಿಲ್ಲ. ಅಪಘಾತದ ಕೇಸಿನಲ್ಲಿ ನನಗೆ ಜಾಮೀನು ಕೊಟ್ಟಿದ್ದು ಗುರುಸ್ವಾಮಿ. ನಮ್ಮ ತಂದೆಯಲ್ಲಿ ನಾನು ಕೆಲಸ ಮಾಡುತ್ತಿದ್ದೆ ನಮ್ಮ ತಂದೆ ಸಂಬಳ ಕೊಡುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದರೂ ಕೂಡಾ ಪರಿಹಾರ ಬರುವುದಿಲ್ಲ ಎಂಬ

ಕಾರಣಕ್ಕಾಗಿ ನಾವು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘವಾದ ದಿನ ನಾವು 4 ಜನರು ಆಟೋದಲ್ಲಿ ಹೋಗುತ್ತಿದ್ದೆವು. ಪ್ಯಾಸೆಂಜರ್ ಒಬ್ಬರಿಗೆ ಗಾಯವಾಗಿತ್ತು. ಮತ್ತು ನನಗೂ ಗಾಯವಾಗಿತ್ತು. ನಾನು ಹಾಜರುಪಡಿಸಿರುವ ಚಾಲನಾ ಪರವಾನಗಿ ನಿಪಿ-10 ವಾಹನವನ್ನು ಸ್ವಂತಕ್ಕೆ ಓಡಿಸಲು ಇರುವ ಪರವಾನಗಿಯೇ ಹೊರತು ಸಾರ್ವಜನಿಕ ವಾಹನ ಓಡಿಸಲು ಇರುವ ಪರವಾನಗಿ ಇಲ್ಲ ಎಂದರೆ ಸರಿ. ನಾನು ಸ್ವತಃ ಹೇಳುವುದೇನೆಂದರೆ ನಾನು ಬ್ಯಾಡ್ಜ್ ಗಾಗಿ ಅರ್ಜಿ ಸಲ್ಲಿಸಿದ್ದೇ ಅದು ರಿನಿವಲ್ ಆಗಬೇಕು. ಆಟೋರಿಕ್ಷಾ ಎಲ್ಲೋ ಬೋರ್ಡ್ ಅಂದರೆ ಪ್ಯಾಸೆಂಜರ್ ಆಟೋ ಎಂದರೆ ಸರಿ. ನಾನು ಪಾಲಿಸಿಯ ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ವಿಮಾ ಕಂಪನಿಯವರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

4. ಅಪಘಾತ ನನ್ನ ತಪ್ಪಿನಿಂದಲೇ ಆಗಿತ್ತು ಎಂದು ಪೊಲೀಸರು ದೋ ಪ ಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ನನಗೆ ಬಲಗೈ ಗೆ ಪೆಟ್ಟಾಗಿ ಒಂದು ವಾರ ಚಿಕಿತ್ಸೆ ಪಡೆದಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ.50 ಸಾವಿರ ಖರ್ಚಾಗಿದೆ ಎಂದು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ, ನಾನು ಸ್ವತಃ ಹೇಳುವುದೇನೆಂದರೆ ಆ ಬಗ್ಗೆ ಯಾವುದೇ ದಾಖಲೆಯು ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತಹ ಯಾವುದೇ ನ್ಯೂನ್ಯತೆಗಳು ನನಗೆ ಇಲ್ಲದಿದ್ದರೂ ಕೂಡಾ ನಾನು ಹೆಚ್ಚಿನ ಪರಿಹಾರಕ್ಕೋಸ್ಕರ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-6 ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನಾನು ವೈದ್ಯರೊಂದಿಗೆ ಷರೀಕಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಕ್ಸರೇ ಕೂಡಾ ನನಗೆ ಸಂಬಂಧಪಟ್ಟಿದ್ದೆ ಅಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ 1 ನೇ ಎದುರುದಾರನ್ನು ಕರೆಯಿಸಿ ಸಾಕ್ಷಿ ಹೇಳಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನಗೂ 1 ನೇ ಎದುರುದಾರನಿಗೂ

ತಂದೆ ಮಗನ ಸಂಬಂಧವೇ ಹೊರತು ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇಲ್ಲದಿದ್ದರೂ ಕೂಡಾ ನಾನು ಸುಳ್ಳು ದಾಖಲೆಯನ್ನು ಸೃಷ್ಠಿಸಿ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ಅಪಘಾತವಾದ ನಂತರ ನಾನು ಒಂದು ವರ್ಷದಲ್ಲಿ ನಾಗಭೂಷಣ್ ವೈದ್ಯರ ಬಳಿಗೆ ಮೂರು ಬಾರಿ ಹೋಗಿದ್ದೇನೆ ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಈಗಲೂ ಡ್ರೈವಿಂಗ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ಪ್ರಕಾರ ನನ್ನ ಜನ್ಮ ದಿನಾಂಕಃ14.08.1983 ಎಂದರೆ ಸರಿ. ಅದು ದಿನಾಂಕ ಸರಿಯಾಗಿದೆ. ನನಗೆ ಯಾವುದೇ ತೊಂದರೆ ಇಲ್ಲದಿದ್ದರೂ ಕೂಡಾ ಹೆಚ್ಚಿನ ಪರಿಹಾರಕ್ಕಾಗಿ ಈ ಸುಳ್ಳು ದಾಖಲೆಗಳನ್ನು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೂಕ್ತ ಚಾಲನಾ ಪರವಾನಗಿ ಇಲ್ಲದ ಕಾರಣ ವಿಮಾ ಕಂಪನಿಯವರು ನನಗೆ ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.